ಇ) 1999-2000ನೇ ಸಾಲಿಗೆ ಸಂಬಂಧಿಸಿದಂತೆ ಬಳಕೆಯಾದ ವಿದ್ಯುತ್ ಹಾಗೂ 31.8.2000ದ ಅಂತ್ಯಕ್ಕೆ ಇರುವ ವಿದ್ಯುತ್ ಬಾಕಿ ಮೊಬಲಗು (ಪ್ರಸಕ್ತ ಸಾಲಿನ ಡಿಮ್ಯಾಂಡ್ ಸೇರಿದಂತೆ) ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ವಿವರಗಳು	ಬಳಕೆಯಾದ ವಿದ್ಯುತ್ ದಶಲಕ್ಷ ಯೂನಿಟ್‌ಗಳಲ್ಲಿ	31.8.2000ದ ಅಂತ್ಯಕ್ಕೆ ಬಾಕಿ (ಕೋಟಿ ರೂ. ಗಳಲ್ಲಿ)
1.	ಕೈಗಾರಿಕಾ ವಲಯ	3,495	545.13
2.	ಕೃಷಿ ವಲಯ (ನೀರಾವರಿ ಪಂಪುಸೆಟ್ಟುಗಳು)	6,309	461.97
		ಒಟ್ಟು	**1007.10**

ಕೃಷ್ಣ ಮೇಲ್ದಂಡೆ ಯೋಜನೆಯ ನೀರಾವರಿ ಸೌಲಭ್ಯ

5025 - ಶ್ರೀ ಅಮರೇಗೌಡ ಬಯ್ಯಾಪುರ ಲಿಂಗನಗೌಡ (ಲಿಂಗಸಗೂರು) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೃಷ್ಣ ಮೇಲ್ದಂಡೆ ಯೋಜನೆಯ ಎಡ ಮತ್ತು ಬಲದಂಡೆ ಮುಖ್ಯ ಕಾಲುವೆಗಳ ಉದ್ದಳತೆ ಎಷ್ಟು? ಇವುಗಳ ರಚನೆಗಾಗಿ ಇಲ್ಲಿಯವರೆಗೂ ಎಷ್ಟು ಹಣ ವ್ಯಯ ಮಾಡಲಾಗಿದೆ?*

ಆ) *ಕೃಷ್ಣ ಮೇಲ್ದಂಡೆ ಯೋಜನೆಯ ಎಡಭಾಗದ ಮುಖ್ಯ ಕಾಲುವೆಯಿಂದ ಎಷ್ಟು ಎಕರೆಗೆ ನೀರಾವರಿ ಸೌಲಭ್ಯ ಕಲ್ಪಿಸಿ ಕೊಡಲಾಗಿದೆ? ಈ ಸೌಲಭ್ಯವನ್ನು ಪಡೆದುಕೊಂಡ ತಾಲ್ಲೂಕುವಾರು ಜಮೀನಿನ ವಿಸ್ತೀರ್ಣ ಎಷ್ಟು? ಉದ್ದೇಶಿತ ಜಮೀನಿನ ವಿಸ್ತೀರ್ಣಕ್ಕೆ ನೀರು ಪೂರೈಕೆಯನ್ನು ಮಾಡಲಾಗಿದೆಯೇ? ಹಾಗಿಲ್ಲದಿದ್ದಲ್ಲಿ ಕಾರಣಗಳೇನು?*

ಇ) *ಕೃಷ್ಣ ಮೇಲ್ದಂಡೆ ಯೋಜನೆಯ ಬಲದಂಡೆಯ ಮುಖ್ಯ ಕಾಲುವೆಯಿಂದ ಇಂದಿಗೂ ಒಂದು ಎಕರೆ ನೀರಿನ ಸೌಕರ್ಯ ಕಲ್ಪಿಸಲಾಗಿಲ್ಲ. ಈ ವಿಳಂಬಕ್ಕೆ ಕಾರಣಗಳೇನು? ಪ್ರಥಮ ಹಂತದಲ್ಲಿ ಈ ಕಾಲುವೆಯಿಂದ ಲಿಂಗಸಗೂರು ತಾಲ್ಲೂಕಿನ ಯಾವ ಯಾವ ಹಳ್ಳಿಗಳು ಯಾವ ಯಾವ ಬೆಳೆಗಳಿಗಾಗಿ ನೀರಿನ ಸೌಕರ್ಯ ಪಡೆಯಲಿವೆ?*

ಶ್ರೀ ಹೆಚ್.ಕೆ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :

ಅ) ಅನುಬಂಧ-1ರಲ್ಲಿ ವಿವರಗಳನ್ನು ನೀಡಲಾಗಿದೆ.

ಆ) ನಾರಾಯಣಪುರ ಎಡದಂಡೆ ಕಾಲುವೆಯಿಂದ 229081.46 ಹೆಕ್ಟೇರ್ ಪ್ರದೇಶಕ್ಕೆ ಅಂದರೆ 5,65,708.20 ಎಕರೆಗೆ ನೀರಿನ ಸೌಲಭ್ಯ ಕಲ್ಪಿಸಿಕೊಡಲಾಗಿದೆ. ಇದಕ್ಕೆ ಈ ವರ್ಷ ಮುಂಗಾರು ಬೆಳೆಗಳಿಗೆ ನೀರನ್ನು ಬಿಡಲಾಗುತ್ತಿದೆ.

ತಾಲ್ಲೂಕು	ವಿಸ್ತೀರ್ಣ ಎಕರೆಗಳಲ್ಲಿ
ಮುದ್ದೇಬಿಹಾಳ	72.90
ಸಿಂಧಗಿ	73443.00
ಸುರಪುರ	197041.83
ಶಹಾಪೂರ	189987.33
ಜೇವರ್ಗಿ	105169.33

ನಾರಾಯಣಪುರ ಎಡದಂಡೆ ಕಾಲುವೆಯಿಂದ ಒಟ್ಟು 10.10ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲ ಯೋಜಿಸಲಾಗಿದ್ದು, ನಾರಾಯಣಪುರ ಎಡದಂಡೆ ಕಾಲುವೆಯ ಉಪ ಕಾಲುವೆಗಳಾದ (1) ಇಂಡಿ ಶಾಖಾ ಕಾಲುವೆ (2) ಮುದೇಬಿಹಾಳ ಶಾಖಾ ಕಾಲುವೆ (3) ಜೇವರ್ಗಿ ಶಾಖಾ ಕಾಲುವೆಗಳಲ್ಲಿಯ ವಿತರಣಾ ಜಾಲಗಳ ಕಾಮಗಾರಿಗಳ ಪ್ರಗತಿಯಲ್ಲಿವೆ. ಈ ಕಾಮಗಾರಿಗಳು ಪೂರ್ಣಗೊಂಡ ನಂತರ ಉಳಿದ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು.

೨) ಕೃಷ್ಣಮೇಲ್ದಂಡೆ ಯೋಜನೆಯ ನಾರಾಯಣಪುರ ಬಲದಂಡೆ ಕಾಲುವೆ ವಿತರಣಾ ನಾಲೆ 1 ರಿಂದ 4ರ ಅಡಿಯಲ್ಲಿ ಈಗಾಗಲೇ 6291.08 ಎಕರೆ ಪ್ರದೇಶದ ಒಣ ನೀರಾವರಿ ಕ್ಷೇತ್ರ ಘೋಷಿಸಲಾಗಿದ್ದು, ನಾರಾಯಣಪುರ ಬಲದಂಡೆ ಕಾಲುವೆಯ ಮುಖ್ಯ ಕಾಲುವೆ ಕಿ.ಮೀ. 0.00 ದಿಂದ 20.00ದವರೆಗೆ ಲೈನಿಂಗ್ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಸದರಿ ಲೈನಿಂಗ್ ಕಾಮಗಾರಿ ಪ್ರಗತಿಯಲ್ಲಿರುವುರಿಂದ ನಾರಾಯಣಪುರ ಬಲದಂಡೆ ಕಾಲುವೆಯಲ್ಲಿ ನೀರು ಪೂರೈಕೆಗೊಳಿಸಿರುವುದಿಲ್ಲ. ನಾರಾಯಣಪುರ ಬಲದಂಡೆ ಕಾಲುವೆಯಿಂದ ಪ್ರಥಮ ಹಂತದಲ್ಲಿ ಲಿಂಗಸಗೂರು ತಾಲ್ಲೂಕಿನ ರೋಡಲಬಂಡಾ, ರಾಂಪುರ, ಚಿಕ್ಕ ಉಪ್ಪೇರಿ, ಸುಣಕಲ್ಲ ಹಿರೇಉಪ್ಪೇರಿ, ಹಾಲಬಾವಿ, ಗೊರೆಬಾಳೆ, ಯರಂಗುಂಟೆ, ಶೀಲಹಳ್ಳಿ, ಕಾಲಾಪುರ, ಜಾಲಿಬೆಂಚಿ, ಮಂಚೇರಿ ಗ್ರಾಮಗಳು ನೀರಾವರಿ ಸೌಲಭ್ಯ ಪಡೆಯಬಹುದಾಗಿದೆ. ಹಾಗೂ ಯೋಜನಾ ವರದಿಯಂತೆ ಜೋಳ, ಶೆಂಗಾ, ಸೂರ್ಯಕಾಂತಿ ದ್ವಿದಳ ಧಾನ್ಯಗಳು, ಹತ್ತಿ, ಮೆಣಸಿನಕಾಯಿ ಬೆಳೆಗಳ ಉತ್ಪನ್ನಕ್ಕಾಗಿ ನೀರಾವರಿ ಸೌಲಭ್ಯ ಬಳಸಿಕೊಳ್ಳಬಹುದಾಗಿದೆ.

ಅನುಬಂಧ - 1

ಕೃಷ್ಣಾ ಮೇಲ್ದಂಡೆ ಯೋಜನೆ ಎಡ ಮತ್ತು ಬಲದಂಡೆ ಮುಖ್ಯ ಕಾಲುವೆಗಳ ಉದ್ದಳತೆಯನ್ನು ಹಾಗೂ ಇಲ್ಲಿಯವರೆಗೆ ಅವುಗಳ ರಚನೆಗಾಗಿ ವ್ಯಯಿಸಿದ ಹಣದ ವಿವರಗಳನ್ನು ಕೆಳಗೆ ನೀಡಲಾಗಿದೆ.

ಮುಖ್ಯ ಕಾಲುವೆಯ ಹೆಸರು	ಉದ್ದ ಕಿ.ಮೀ.ಗಳಲ್ಲಿ	ವ್ಯಯಿಸಿದ ಹಣ ರೂ. ಕೋಟಿಗಳಲ್ಲಿ
1. ನಾರಾಯಣಪುರ ಎಡದಂಡೆ ಕಾಲುವೆ	78.00	118.04
2. ನಾರಾಯಣಪುರ ಬಲದಂಡೆ ಕಾಲುವೆ	95.00	381.00

ಮುಖ್ಯ ಕಾಲುವೆಯ ಹೆಸರು	ಉದ್ದ ಕಿ.ಮೀ.ಗಳಲ್ಲಿ	ವ್ಯಯಿಸಿದ ಹಣ ರೂ. ಕೋಟಿಗಳಲ್ಲಿ
3. ಆಲಮಟ್ಟಿ ಎಡದಂಡೆ ಕಾಲುವೆ	103.00	31.08
4. ಆಲಮಟ್ಟಿ ಬಲದಂಡೆ ಕಾಲುವೆ	121.00	1.93
5. ಮುಳವಾಡ ಏತ ನೀರಾವರಿ ಕಾಲುವೆ (ಆಲಮಟ್ಟಿ ಜಲಾಶಯದಿಂದ)	128.50	42.05
6. ರಾಂಪೂರ ಏತ ನೀರಾವರಿ ಯೋಜನೆ (ನಾರಾಯಣಪುರ ಜಲಾಶಯದಿಂದ)	37.50	43.51
7. ಇಂಡಿ ಏತ ನೀರಾವರಿ ಯೋಜನೆ	96 .50	1.85

ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರ ಸಂಘ

5027 - ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ (ಸಂಕೇಶ್ವರ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೆಪಿಟಿಸಿಎಲ್ ಖಾಸಗೀಕರಣದ ಹಿನ್ನಲೆಯಲ್ಲಿ ಹುಕ್ಕೇರಿ ತಾಲ್ಲೂಕು ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರ ಸಂಘದ ಮೇಲೆ ಏನಾದರೂ ದುಷ್ಪರಿಣಾಮವಾಗಿದೆಯೇ?*

ಆ) *ಹಾಗಿದ್ದಲ್ಲಿ ಈ ಸಹಕಾರ ಸಂಘಕ್ಕೆ ನೋಂದಣಿ ಫೀ ಮತ್ತು ರಿನ್ಯೂ ಫೀ ಇತ್ಯಾದಿಗಳ ಬಗ್ಗೆ ರಿಯಾಯ್ತಿ ನೀಡಲು ಉದ್ದೇಶಿಸಲಾಗಿದೆಯೇ?*

ಇ) *ರಾಜ್ಯದಲ್ಲಿ ಸಹಕಾರ ತತ್ವದ ಆಧಾರದ ಮೇಲೆ ನಡೆಯುತ್ತಿರುವ ಈ ಸಂಘ ಉಳಿಯಬೇಕಾದರೆ ಯಾವ ಆಧಾರದ ಮೇಲೆ ಸಹಾಯ ಸಹಕಾರ ನೀಡಲಾಗುವುದು?*

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) :

ಅ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ (ಕೆ.ಪಿ.ಟಿ.ಸಿ.ಎಲ್) ಖಾಸಗೀಕರಣ ಮಾಡಿರುವುದರಿಂದ ಈ ಸಂಘಕ್ಕೆ ನೇರವಾಗಿ ದುಷ್ಪರಿಣಾಮವಾಗಿರುವುದಿಲ್ಲ.

ಆದರೆ ಕರ್ನಾಟಕ ಸರ್ಕಾರವು ವಿದ್ಯುತ್ ರಂಗದ ಖಾಸಗೀಕರಣದ ಕುರಿತು ಜಾರಿಗೆ ತಂದಿರುವ "ದಿ ಕರ್ನಾಟಕ ಎಲೆಕ್ಟ್ರಿಸಿಟಿ ರಿಫಾರ್ಮ್ ಆಕ್ಟ್ 1999ರ ಅಡಿಯಲ್ಲಿ ರಚಿತವಾಗಿರುವ ಆಯೋಗವು ಲೈಸೆನ್ಸಿಂಗ್ ಫೀ ಬಗ್ಗೆ ದಿನಾಂಕ 7.6.2000ದಲ್ಲಿ ನೀಡಿರುವ ನೋಟಿಫಿಕೇಶನ್‌ನಲ್ಲಿ ಕಲಂ ನಂ. 12ರಲ್ಲಿ ವಿಧಿಸಿರುವ ಲೈಸೆನ್ಸ್ ಹಾಗೂ ರಿನ್ಯೂವಲ್ ಫೀಗಳಿಂದಾಗಿ ಸಂಘದ ಮೇಲೆ ದುಷ್ಪರಿಣಾಮವಾಗಿರುತ್ತದೆ.

ಆ) ಕರ್ನಾಟಕ ಸರ್ಕಾರದ ಇಂಧನ ಇಲಾಖೆಯು ಉತ್ತರಿಸಬೇಕಾಗಿರುತ್ತದೆ.